# <u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ</u>

## <u>ಸಿ.ಸಿ. ಸಂಖ್ಯೆ : 1003/2010</u>

**ಚಾಸಾ : 14**

**ಪ್ರಾಸಾ : 12**

| | |
|---|---|
| **ಹೆಸರು** | ಃ ಹಮೀದ್ |
| **ತಂದೆಯ ಹೆಸರು** | ಃ ಅಹಮದ್ |
| **ವಯಸ್ಸು** | ಃ 62 ವರ್ಷ |
| **ಉದ್ಯೋಗ** | ಃ ಕೃಷಿಕ |
| **ವಾಸಸ್ಥಳ** | ಃ ಮೈತಾಡಿ ಗ್ರಾಮ |

**<u>ದಿನಾಂಕ ಃ 07-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -</u>**

1. ಚಾಸಾ-13 ರವರ ಪರಿಚಯವಿರುವುದಿಲ್ಲ. ಆರೋಪಿಯ ಪರಿಚಯವಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ ಕ್ರಮ ಜರುಗಿಸಿ, ಯಾವುದೇ ಕೋರಿಕೆಯ ಸಹಿಗಳನ್ನು ಮಾಡಿರುವುದಿಲ್ಲ. ಈ ಬಗ್ಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ಮಹಜರನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದರಿಂದ ಸದರಿ ಮಹಜರನ್ನು ನಿಪಿ13 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ13 ಎ ಎಂದು ಗುರುತಿಸಲಾಯಿತು. ನಿಪಿ13 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಈ ಬಗ್ಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಮುಖ್ಯ ವಿಚಾರಣೆ ಮುಕ್ತಾಯ.

**(ಈ ಹಂತದಲ್ಲಿ *ಸ. ಸ. ಅ.* ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>**

1. ದಿನಾಂಕ 20-07-2010 ರಂದು ನಾನು ಪೋಲಿಸ್ ಠಾಣೆಗೆ ಹೋಗಿದ್ದಾಗ ಅಲ್ಲಿ ಚಾಸಾ13 ರವರು ಹಾಜರಿದ್ದು, ಆ ಸಮಯದಲ್ಲಿ ಈ ಪ್ರಕರಣದ ತನಿಖಾಧಿಕಾರಿಯವರು ಪ್ರಕರಣದ ವಿಚಾರವನ್ನು ತಿಳಿಸಿ, ಚಾಸಾ13 ರವರ ಕೋರಿಕೆಯ ಸಹಿ ಹಾಗೂ ಬರವಣಿಗೆಗೆ ಸಹಿಯನ್ನು ಪಡೆದು, ಅಮಾನತ್ತು ಮಹಜರ ಕ್ರಮ ಜರುಗಿಸುವಾಗ ಸಾಕ್ಷಿಯಾಗಬೇಕೆಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಪೋಲಿಸರು ನನ್ನ ಸಮಕ್ಷಮ ಬಿಳಿ ಹಾಳೆಯಲ್ಲಿ ಚಾಸಾ13 ರವರು ಕೋರಿಕೆಯ ಸಹಿಯನ್ನು ತೆಗದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅದೇ ದಿನ ಪೋಲಿಸರಿಗೆ ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ಸಾಕ್ಷಿಗೆ ಹೇಳಿಕೆಯನ್ನು ಓದಿ ಹೇಳಲಾಗಿ, ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ14 ಎಂದು ಗುರುತಿಸಲಾಯಿತು. ಈ ಪ್ರಕರಣದ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಬಿ ಎಸ್ ಪಿ ವಕೀಲರಿಂದಃ-**

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪಾಟಿ ಸವಾಲು ಮುಕ್ತಾಯ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-

(ಪ್ರದೀಪ ಪೋತೆದಾರ)
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.